Rega No BG 155

— ಶ್ರೀ —

17—4—1961

Sri
" SATYAVADI "
— DAILY —
MYSORE 4
45 th Year

Protect the cow

ಸತ್ಯವಾದಿ

ಸ್ಥಾಪಕರು— ಅಮಸನೆ ಸಿಂಪ್ಸೇದಾರ್ ಎಂ. ಎ ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಕನ್ನಡ ಪತ್ರಿಕಾವಾನಗಳಿಗೆ
ಅಭಿಪ್ರಾಯಪೂರ್ಣ ಲೇಖನಗಳಿಗೆ
* ಸತ್ಯವಾದಿ * ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಬೆಲಿಯಂ ಸೈನವು ಕಾಂಗೋವನು ಬಿಡಬೇಕು

ವಿಷಮಿಶ್ರಿತ ಆಹಾರದಿಂದ

ಊಜ್ಡ್ (ಪೂರ್ವ ಪೊಲಾಕೊ) ರಿಚ ಸಿದ್ಧಯಾಹಿಂಬಾವಲ್ಲಿನ ರಹಸ್ಯ ನಿವೇಶನಕ್ಕೆ ಭೇಟಿಕೊಡಲು ಬಂದಿರುವ ಸಾವಿರಾರು ಮಂದಿಯೂ ವಿಷಮಿಶ್ರಿತ ಆಹಾರ ಸೇವನೆಯಿಂದ ನರಳುತ್ತಿರುವರು ; ಗುರುವಾರ 20 ಸಾವಿರ ಮಂದಿಗೆ ಊಟಹಾಕಲಾಗಿ ತಿಂದವರೆಲ್ಲಾ ನರಳುತ್ತಾ ಆಸ್ಪತ್ರೆ ಸೇರಿದರು : ಅಂಬ್ಯುಲೆನ್ಸು ಕಾರುಗಳ ಓಡಾಟ ಜೋರಾಗಿದೆ : ಪೋಲೀಸರ ತನಿಖೆ ನಡೆಯುತ್ತಿದೆ.

ಆಹಾಯಕಾರಿ ಪ್ರಧಾನಿ

ಕೇಪಟೌನ್ 15— ಶಾಸನಸಭೆಯಲ್ಲಿ ದಕ್ಷಿಣ ಆಫ್ರಿಕ ಪ್ರಧಾನಿ ಹೆನ್ರಿಡಿಕ್ ವೆರ್‌ವೊಡ್ರಂ, ದಕ್ಷಿಣ ಆಫ್ರಿಕಾ ಪತ್ರಿಕೆಗಳು ಎಲ್ಲವಿರಾರಿ ವರ್ತಿಸುತ್ತಿವೆಯೆಂದು ಶಾಸನಸಭೆಯಲ್ಲಿ ಹೇಳಿದರು ;— ಸಂಯುಕ್ತ ಪಾರ್ಟಿಯು ಸದಸ್ಯ ವೇಡರ್ ವಾರ್ತೆಮಾಡಿರಬಿಲ್ಲರು, ಪ್ರಧಾನಿಯು ದೇಶದ್ರೋಹಿ ಅಪಾಯಕಾರಿ ಎಂದು ಹೇಳಿದ್ದರಿಂದ ಅವನನ್ನು ಹೊಂಕ್ಕೆ ಕಳುಹಿಸಲಾಯಿತು.

ನಿರಾಧಾರ ಸುದ್ದಿ

ಮಾಸ್ಕೊ 15—ಗೂಢಚಾರ ವಿಮಾನ ನಡಿಸಿ 10 ವರ್ಷ ಶಿಕ್ಷೆಗೆ ಗುರಿಯಾಗಿರುವ ಅಮೇರಿಕಾದ ಫ್ರಾನ್ಸಿಸ್ಸನ ಪವರ್ಸ್ ಬಿಡುಗಡೆ ಮಾಡಲ್ಪಡುವನೆಂಬ ಸುದ್ದಿ ವಿಷಯ ತನಗೇನೂ ಗೊತ್ತಿಲ್ಲವೆಂದು ರಷ್ಯಾ ಅಟರ್ನಿ ಜನರಲ್ ಅಮೇರಿಕ ಪತ್ರಿಕೋದ್ಯೋಗಿಗೆ ತಿಳಿಸಿದರು.

★

ನಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ವೈವಜ್ಞಶಿಖಾಮಣಿ
ಪಂಪಶ್ಯಾಮ್ಶಾಜೋಯಿಸರಿಂದ

18 ಮಂಗಳವಾರ ತದಿಗೆ (ಬೆ 8-55)
ಕೃತಿಕೆ (ಬೆ 7—46) ಕಟಕ ಲಗ್ನ

ಚಿನ್ನದ ಗಣಿ

ಬೆಂಗಳೂರು 16 — ಕೇಂದ್ರದಿಂದ ಹಣಕಾಸಿನ ನೆರವಿಲ್ಲದೆ ಸಂಕಾಂವು ಕೋಲಾರದ ಚಿನ್ನದ ಗಣಿಯನ್ನು ನಡೆಸಲು ಸಾಧ್ಯವಿಲ್ಲವೆಂದು ಶಾಸನಸಭೆಯಲ್ಲಿ ಮುಖ್ಯ ಮಂತ್ರಿಗಳು ತಿಳಿಸಿದರು.

ಆನೆಕಲ್ಲು ಮಳೆಯಿಂದ

ಬಿಲಾಸಪುರ ಜಿಲ್ಲೆಯ ಸೋಹಗಪುರ ಗಾಮದಲ್ಲಾದ ಭಾರಿ ಆನೆಕಲ್ಲು ಮಳೆಯಲ್ಲಿ ಮಂಗಳವಾರ ಒಬ್ಬ ಹರಿಜನ ಹೆಂಗಸು ಸತ್ತು 15 ಮಂದಿ ಗಾಯಗೊಂಡರು.

ವಿಮಾನಗಳಿಂದ ಹಾವಳಿ

ಹವನಾ 15— ಪಶ್ಚಿಮಕ್ಕೂಬಾದ ಮೇಲೆ ಗುರ್ತು ಸಿಕ್ಕದ ವಿಮಾನಗಳು ಓಡಾಡಿ ಬಾಂಬು ಹಾಕಿದ್ದರಿಂದ 47 ಮಂದಿ ಸತ್ತು, ವಿದ್ವಂಸಕಾರಿನ ದಾಸ್ತಾನು ಸಿಡಿದು ವಿಮಾನ ನಿಲ್ದಾಣಗಳು ಹಾಳಾಗಿವೆ

ವೀರನ ನುಡಿ

ಮಾಸ್ಕೊ 15— ಬಾಹ್ಯಾಕಾಶ ಹಡಗಿನಲ್ಲಿ ಸುತ್ತಿಬಂದ ಮೇಜರು ಯಾರಿಗಾಗರಿನು 1000 ಮಂದಿ ಜಯಕಾರ ಮಾಡಿದ ಪತಿಕೋದ್ಯೋಗಿಗಳಿಗೆ, ತಾನು ಅಂಗಾಂಕ ಮತ್ತು ಶಾಕ್ಯ ಗೃಹಗಳನ್ನು ನೋಡಬೇಕೆಂಬ ಇಚ್ಛೆ ಹೊಂದಿರುವದಾಗಿ ತಿಳಿಸಿದನು

ಕಟು ಟೀಕೆ

ನವದೆಹಲಿ 15— ಭಾರತವು ಅಮೇರಿಕಾದೊಡನೆ ಆಹಾರ ಒಪ್ಪಂದ ಮಾಡಿಕೊಳ್ಳುವುದನ್ನು ಲೋಕಸಭೆಯಲ್ಲಿ ಕಮ್ಯುನಿಸ್ಟ್ ಮೆಂಬರು ಏ ಪಿ ನಾಯರ್‌ರು ಕಟುವಾಗಿ ಟೀಕಿಸಿದರು.

ಕಳ್ಳೇ ಕೆಲಸ

ಮಾಸ್ಕೊ 15.... ಸಾವಿರಾರು ರಾಕೆಟುಗಳನ್ನು ಪತ್ತಾಣಾವಾಯುಕಾರಿ ಪದಾರ್ಥಗಳನ್ನು ಸಾಗಿಸಲು ಉಪಯೋಗಿಸುವ ಇಚ್ಛೆ ಇಲ್ಲವೆಂದೂ, ನಿಶ್ಯಸ್ತ್ರೀಕರಣವಾಗಬೇಕೆಂದೂ ಪ್ರಧಾನಿ ಕೃಶ್ಚೇವರು ಹೇಳಿದರು.

ಸಕ್ಕರೆ ಮೇಲಿನ ಹತೋಟಿ

ನವದೆಹಲಿ 15— ಸಕ್ಕರೆ ಕೈಗಾರಿಕೆಗೆ ಒದಗಿರುವ ಹೆಚ್ಚುವರಿ ಬಿಕ್ಕಟ್ಟನ ಪರಿಹಾರಕ್ಕೆ ಸಕ್ಕರೆ ಮೇಲಿನ ಹತೋಟಿಯನ್ನು ತೆಗೆದು ಹಾಕಲು ಕೇಂದ್ರ ಸರಕಾರ ಇಚ್ಛೆಪಡುವುದಿಲ್ಲವೆಂದು ವ್ಯಕ್ತವಾಗಿದೆ.

ಗೋಲೀಬಾರ್

ಇಂಫಾಲ (ಮಣಿಪುರ) 15— ಮಣಿಪುರದ ಟೆಂಟೋರಿಯಲ್ ಕೌನ್ಸಿಲ್ಲಿನ ಒಬ್ಬ ಸದಸ್ಯನನ್ನು ಪೋಲೀಸರು ದಸ್ತಗಿರಿ ಮಾಡುವುದಕ್ಕೆ ಅಡ್ಡಿಪಡಿಸಿ ಭೀಕರ ಆಯುಧಗಳೊಡನೆ ಬಂದ ಗುಂಪಿನ ಮೇಲೆ ಪೋಲೀಸರು ಗೋಳೀಬಾರು ಮಾಡಿದ್ದರಿಂದ 15 ಮಂದಿ ಗಾಯಗೊಂಡರು

ದಲೈಲಾಮ - ನೆಹರು ಭೇಟಿ

ನವದೆಹಲಿ 15— ಇಲ್ಲಿಗೆ 5 ದಿನಗಳ ಭೇಟಿಗಾಗಿ ಬಂದಿರುವರು ; ನಾಳೆ ಪಂಡಿತ ನೆಹರೂರೊಡನೆ ಟಿಬೆಟ್ಟು ಸಂಕಾಶ್ಯಕ್ರಮ ವಿಚಾರದಲ್ಲಿ ಸಾಕಷ್ಟು ಚರ್ಚೆ ನಡೆಸುವರು.

ಅಂತರಾಷ್ಟ್ರ ತನಿಖೆ

ವಿಶ್ವಸಂಸ್ಥೆ 15.... ಲುಮುಂಬಾ ಮರಣದ ಬಗ್ಗೆ ಅಂತರಾಷ್ಟ್ರೀಯ ತನಿಖೆ ನಡೆಯುವುದೇಕೆಂದು ವಿಶ್ವಸಂಸ್ಥೆಯಲ್ಲಿ ಭಾರತ ಪ್ರತಿನಿಧಿಯು ನಿರ್ಣಯ ತಂದಿರುವರು.

ವಿಶ್ವಸಂಸ್ಥೆ 16— ಬೆಲ್ಜಿಯಂ ಮತ್ತು ಇತರ ವಿಶ್ವಸಂಸ್ಥೆಯಾದ್ಯುದ ಇತರ ಹೊಂದೇಶದ ಸೈನ್ಯಗಳೂ ಮತ್ತು ಕಾಣಿಕೀಯ ಸಲಹೆಗಾರರೂ ಕಾಂಗೋದಿಂದ ಹೊಂಡಬೇಕೆಂದು ಜನರಲ್ ಅಸೆಂಬ್ಲಿಯು ಮತ್ತೆ ಕರೆಯಿತ್ತಿತು.

★

ಮದರಾಸು 16— ಡಿ ಎಂ ಕೆ ಪಾರ್ಟಿಗೆ ಪಾರ್ಲಿಮೆಂಟು ಸದಸ್ಯ ಸಂಪತ್ ರಾಜೀನಾಮೆ ಕೊಟ್ಟನಂತರ ಪಾರ್ಟಿಯು ಸುಮಾರು 20000 ಸದಸ್ಯರು ಪಾರ್ಟಿಯನ್ನು ಬಿಟ್ಟಿರುವರು.

o o

ಬೆಂಗಳೂರು— ವಿಶ್ವಸಂಚ ಯುದ್ಧದ ಸಂಭವ ಕಾಣದಿರಿತ್ತಿದೆಯೆಂದು ಭಾರತ ರಕ್ಷಣಾಮಂತ್ರಿ ಕೃಷ್ಣಮೆನನ್ನರು ಅಭಿಪ್ರಾಯ ವ್ಯಕ್ತಪಡಿಸಿದರು — ಅಣುಶಸ್ತ್ರಾಸ್ತ್ರಗಳು ಇತರೆಂವೇಲೆ ಬೀಳುವ ಸ್ಥಳಯುದ್ಧಮಾತ್ರವಾಗಿಂದೆ, ವಿಶ್ವ ವಿನಾಶಕಾರಿಯಾದುದೂ ಆಗಿದ್ದಿ. ಯುದ್ಧ ಅವೇರಿಕ ಬಂದುಗಡಿದ್ದರೆ ಉಳಿಗಾಲವಿಲ್ಲವೆ ದೂ ಹೇಳಿದರು.

o o

ಕೊಲಂಬೊ 16— ಸಿಲೋನು ಮಂತ್ರಿ ಮಂಡಲದ ತುರ್ತು ಸಭೆ ಸೋಮವಾರ ಏರ್ಪಡಿಸಲಾಗಿದೆ ; ಪ್ರಾಯಶಃ ಪೆಡರಲು ಪಾರ್ಟಿ ಪ್ರಾಂತಶಾಸನೋಲ್ಲಂಘನ ವಿಚಾರದ ಬಗ್ಗೆ ಚರ್ಚಿಸಲು — ಈ ಮಧ್ಯೆ ಪೆಡರಲು ಪಾರ್ಟಿ ಹೆಚ್ಚು ಪೋಸ್ಟಾಫೀಸುಗಳನ್ನು ಸ್ಥಾಪಿಸುತ್ತಿದೆ — ಜರೂರು ಶಿಕ್ಷಣ ಸಾರಲ್ಪಡಬಹುದೆಂದು ಹೇಳಲಾಗುತ್ತಿದೆ.

o o

ಕಟಕ್ 16— ಜನಾಪಣೆಯು ಗಣತಂತ್ರ ಮತ್ತು ಸ್ವತಂತ್ರ ಪಾರ್ಟಿಯು ಮೈತ್ರಿಯನ್ನು ಕಾಂಗ್ರೆಸ್ಸು ಅಧ್ಯಕ್ಷ ಸಂಜೀವರೆಡ್ಡಿಯವರು ಅಲ್ಲಗಳೆದು, ಇದು ಸ್ವಾರಸ್ಯವೂ ವಿಚಿತ್ರವೂ ಆಗಿದೆ ಎಂದು ಹೇಳಿರುವರು.

ಪರೀಕ್ಷೆಗಳು

ಪರೀಕ್ಷೆ ಕಾಲವನ್ನು ಹೇಗಿರುವುದೆಂಬುದನ್ನು ವಿದ್ಯಾರ್ಥಿಗಳು ಮಾತ್ರ ಬಲ್ಲರು ; ಅಗ ಅವರ ಹೃದಯುಳ್ಳ ಕಟ್ಟುವ ಭೀತಿಯನ್ನು ಡಕ್ಕನರಿಯು ಯಾವ ಗುಣ ವಿಶೇಷಗಳಿಂದ ವಿವರಿಸಲಾರವು ; ಇದರ ಜೊತೆಯು ಹೋಲಿಕೆಯುಳ್ಳ ಚಂಡಮಾರುತವಾಗಲೀ ಪ್ರಳಯಂಕರವಾಗಲೀ ಅಲ್ಲವು

ಆ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಬಿಟ್ಟು ಬೇರೆ ಯೋಚನೆಗಳಾಗಲಿ ಲಿಲ್ಲ ; ತಾನು ನಾಪಾಸಾಗಬಹುದೆಂದೂ ತನ್ನನ್ನು ಕಾಲೇಜಿನಿಂದ ಹೊರಗೆ ಕಳುಹಿಸುವರೆಂದೂ ತಂದೆಯವರಿಗೆ ಅಗುವುದಿಲ್ಲವೆಂದೂ, ತಾನು ಫೇಲಾಗಲು ಅವರು ಕೈಲಾಸಕ್ಕೆ ಹೊರಟು ಹೋಗುವರೆಂದೂ ಚಿಂತೆಯಾಗಿರುವುದು ; ಅದೃಷ್ಟ ವಿದ್ಯಾರ್ಥಿಯೊಬ್ಬನಿಗೆ ಪ್ರೊಫೆಸರಿಂದ ಪರೀಕ್ಷೆ ಪ್ರಶ್ನೆ ತಿಳಿದಿರುವದೆಂದೂ ಅದಂ ಉತ್ತರ ತನಗೊಬ್ಬನಿಗೇ ಗೊತ್ತೆಂದು ಹೇಳಲಾಗುತ್ತಿದ್ದರು, ಆ ಪ್ರಶ್ನೆ ಉತ್ತರಗಳು ಎಲ್ಲೆಲ್ಲಿ ಟ್ಯೂಷನ್ನುಗಳಲ್ಲೂ, ಕ್ಲಾಸುರೂಂಗಳಲ್ಲೂ, ಕ್ಯಾಂಟೀನುಗಳಲ್ಲೂ ಹಂಡಿಹೊಗುತ್ತಿರುವುದು. ವಿದ್ಯಾರ್ಥಿಗಳಿಗೆ ಆಶ್ಚರ್ಯವಾಗುವಂತೆ ಯಾವ ಪ್ರಶ್ನೆಗಳು ಕೇಳಲ್ಪಡುವ ವಿಷಯದಲ್ಲಿ ಊಹಾಪೋಹಗಳು ಹೇಳತೀರದ್ದಾಗಿದೆ. ಪರೀಕ್ಷಾ ಕಾಲದಲ್ಲಿ ಜೂನಿಯರ್ ವಿದ್ಯಾರ್ಥಿಗಳು ಸೀನಿಯರ್ ವಿದ್ಯಾರ್ಥಿಗಳನ್ನೂ, ಸೀನಿಯರ್ ವಿದ್ಯಾರ್ಥಿಗಳು ಮಿತ್ರಿಶರನ್ನೂ ಬೇಕಾದೆ ವಿಷಯುಗಳ ಬಗ್ಗೆ ಕೇಳುತ್ತಿರುವರು ಹಳೇ ಪಶ್ನೋತ್ತರ ಪುಸ್ತಕಗಳೂ, ನೋಟ್ಸುಗಳೂ, ಧೂಳುರಾಶಿಗಳಿಂದ ಟೇಬಲ್ಲು ಬೀರುಗಳ ಕೆಳಗೆ ಎಸೆಯುಲ್ಪಟ್ಟಿದ್ದ ಸ್ಥಳಗಳಿಂದ ಈಚೆಗೆ ಬರುವವು ; ಫೀಬಲ್ಲಿನ ಮೇಲೆ ರಾಶಿರಾಶಿಯಾಗಿ ಬೀಳುತ್ತಿರುವವು ವಿದ್ಯಾರ್ಥಿಗಳ ಜ್ಞಾನವೆಲ್ಲಾ ಪರೀಕ್ಷೆ ಪೆಡಂಭೂತದ ಕಡೆಯೇ ಇರುತ್ತದೆ : ಪರೀಕ್ಷೆಗೆ ಹೋಗುವಾಗ ತಾವುತಾವೇ ಏನೇನೋ ಗೊಣಗುಟ್ಟುತ್ತಾ ಹೋಗುವರು, ಗಟ್ಟಿಯಾಗಿ ಏನೇನೋ ಮಾತನಾಡಿಕೊಳ್ಳುತ್ತಾ ಹೋಗುವುದೂ ಉಂಟು ; ಪರೀಕ್ಷೆಯಲ್ಲಿ ಕೇವಲ ಒಕ್ಕು ಅಡ್ಡಲಾದರೆ ಇವರ ಭಯ ಹೇಳತೀರದು. ಎಲ್ಲ ವಿದ್ಯಾರ್ಥಿಗಳ ಪರಿಸ್ಥಿತಿ ಹೀಗಿದ್ದರೆ, ಕೆಲವರಿಗೆ ಪರೀಕ್ಷೆಯ ಯಾವ ಗೋಳೂ ತಟ್ಟದಂತೆ ಏನೂ ಚಿಂತೆಯಿಲ್ಲದೆ ಸುಖವಾಗಿರುತ್ತಾರೆ ; ಮತ್ತೆ ಕೆಲವರು ಪರೀಕ್ಷೆ ಒಂದು ಲಾಟರಿಯೆಂದೂ, ಅದಕ್ಕಾಗಿ ಮನಸ್ಸನ್ನು ತುಂಬಾ ಕೆಡಿಸಿಕೊಳ್ಳಬಾರದೆಂದೂ ಹೇಳುತ್ತಾರೆ.

Help 'The Gorakshana'

Advertise in Goraksana and help the pious cause

ನಿಮಗೆ ಬಲಹೀನತೆ ಉಂಟೇ ?

ಹಾಗಾದರೆ ವೈದ್ಯರಾದ ಎ. ಎಲ್ ಸರ್ಕಾರ್ (ಸರ್ಕಾರಿ ರಿಜಿಸ್ಟರ್ಡ್) ವಕ್ಕ ಡಾ॥ ಎಸ್. ಎಂ. ಆರ್. ಮೋಥಿವಾನ್ನು ಖುದ್ದು ಭೇಟಿಮಾಡಿ ಅವರು ನರಗಳ ನಿಶ್ಶಕ್ತಿ, ಬಹುಮೂತ್ರ, ಮೂಲಾವ್ಯಾಧಿ ಮುಂತಾದ ವ್ಯಾಧಿಗಳಿಗೆ ವಿಫಲವಾಗದ ಚಿಕಿತ್ಸೆ ನಡೆಸುವರು

ನರಗಳ ನಿಶ್ಶಕ್ತಿಗೆ ವಿದ್ಯುಚ್ಛಕ್ತಿ (ಎಲೆಕ್ಟ್ರಿಫೆರೊಪಿ) ಮೂಲಕ ಚಿಕಿತ್ಸೆ

ಸಲಹೆಯ ಕಾಲ : ಬೆಳಿಗ್ಗೆ 10 ರಿಂದ 1 ಗಂಟೆ ಸಂಜೆ : 5 ರಿಂದ 6-30 ಗಂಟೆ
ಭಾನುವಾರ ಬೆಳಿಗ್ಗೆ 10 ರಿಂದ 1 ಗಂಟೆ

ಸರ್ಕಾರ್ ಡಿಸ್ಪೆನ್ಸರಿ
263 ರಘುಲಾಲ್ ಆಂಡ್ ಕೋ ಬಳಿ, ಮೈಸೂರು

Edited, Printed & Published by the Proprietor Dharma Prachara Nirata M. S. Krishna Rao, at the Satyavadi Press Chamarajapuram, Mysore 4.

★ SEE TO-DAY ★

At Woodlands : Glorious 2nd Week

'Never before on the Screen— The glories, The Triumphs, the Conquests of the World's mightiest man !

HERCULES UNCHAINED

Steve Reeves as Hercules — — in Eastman Color

See— War of Chariots, Arena of Tigers, Court of Lover, Temptress Lydia, Contest of Giants, Combat of Kings

ಅಪೆರಾ— ಜಯಪ್ರದ 2ನೇ ವಾರ

.... ಪ್ರತಿ ಸಂಸಾರವೂ ನೋಡಬೇಕಾದ ಸಾಮಾಜಿಕ ಚಿತ್ರ ....

ಉತ್ತಮಪುತ್ರ ರತ್ನಂ (ತಮಿಳು)

ಪಾತ್ರ— ಕನ್ನಾಂಬಾ, ಮಾಲಿನಿ, ಪಂಡರಿಬಾಯ್, ಎಂ ಎಸ್ ರಾಜ್ಯಂ ವಿ ಕೆ ರಾಮಸ್ವಾಮಿ, ಕುಲದೈವಂ ರಾಜಗೋಪಾಲ್, ಪಹರ್ಸನಾಮಂ, ಬಾಲಾಜಿ

ಸೆಂಮಿಕ್ ಕಂಡೆನ್ಸರಿನಲ್ಲಿ ಚಿತ್ರವು ಜಿಟಿಗೆ ಹಾಲಕಲ್ಪಡುತ್ತಿದೆ

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರ ಏಕೈಕ ಕನ್ನಡ ಪತ್ರಿಕೆ.